ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಕೊಠಡಿ ಸಂಖ್ಯೆ: 2019, ಬಹುಮಹಡಿಗಳ ಕಟ್ಟಡ ಬೆಂಗಳೂರು-560001
ದೂರವಾಣಿ ಸಂಖ್ಯೆ: 080-22372738 ಈ-ಮೇಲ್: nrega@karnataka.gov.in

ಸಂ: ಗ್ರಾಅಪ 197 ಉಖಾಯೋ 2019 ದಿನಾಂಕ: 17-11-2022

# ಸುತ್ತೋಲೆ

ಮಾನ್ಯರೇ,

ವಿಷಯ: ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಗೊಳಿಸಿದ ಕಾಮಗಾರಿಗಳ ಸಾಮಗ್ರಿ ವೆಚ್ಚಗಳಿಗೆ ಅನುದಾನ ಬಿಡುಗಡೆ ಮಾಡುವ ಮುನ್ನ ಅನುಸರಿಸಬೇಕಾದ ಕ್ರಮಗಳ ಕುರಿತು.

ಉಲ್ಲೇಖ: ನರೇಗಾ ಆಯುಕ್ತಾಲಯದ ಪತ್ರ ಸಂ: ಗ್ರಾಅಪ 197 ಉಖಾಯೋ 2019 ದಿ: 19-05-2020 & 03-06-2020.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಗ್ರಾಮ ಪಂಚಾಯತ್ ಮತ್ತು ಅನುಷ್ಠಾನ ಇಲಾಖೆಗಳಿಂದ ಅನುಷ್ಠಾನಗೊಳಿಸಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ 1st and 2nd Signatory ಯಲ್ಲಿ ಬಾಕಿ ಇರುವ ಸಾಮಗ್ರಿ ವೆಚ್ಚದ ಎಫ್.ಟಿ.ಒ.ಗಳನ್ನು ಇತ್ಯರ್ಥಪಡಿಸಲು ಉಲ್ಲೇಖದಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿತ್ತು. ಆದರೆ ನರೇಗಾ ಕಾಮಗಾರಿಗಳನ್ನು ವಿವಿಧ ಅನುಷ್ಠಾನ ಇಲಾಖೆಗಳು ಅನುಷ್ಠಾನಗೊಳಿಸುತ್ತಿರುವುದರಿಂದ ಆಯಾ ಇಲಾಖೆಯ ಅಧಿಕಾರಿಗಳು ಸಹಿತ ಕಾಮಗಾರಿಗಳ ಗುಣಮಟ್ಟವನ್ನು ತಾಂತ್ರಿಕವಾಗಿ ಪರಿಶೀಲಿಸುವುದು ಅವಶ್ಯಕವಾಗಿರುತ್ತದೆ. ಅದರಂತೆ ಕೆಲವು ಮಾರ್ಪಾಡುಗಳೊಂದಿಗೆ ಉಲ್ಲೇಖದ ಮಾರ್ಗಸೂಚಿಯನ್ನು ಪರಿಷ್ಕರಿಸಿದೆ. **ಹಿಂದಿನ ಉಲ್ಲೇಖಿತ ಆದೇಶ ರದ್ದಾಗಿದ್ದು, ಸದರಿ ಪರಿಷ್ಕರಿಸಿದ ಮಾರ್ಗಸೂಚಿಯಂತೆ ಪರಿಶೀಲಿಸುವುದು ಕಡ್ಡಾಯವಾಗಿದೆ.**

ಮಹಾತ್ಮಗಾಂಧಿ ನರೇಗಾ ಯೋಜನೆಯ ಗ್ರಾಮೀಣ ಪ್ರದೇಶಗಳಲ್ಲಿ ಆಸ್ತಿಗಳನ್ನು ಸೃಜನೆ ಮಾಡುವ ಯೋಜನೆಯಾಗಿದ್ದು, ಗ್ರಾಮ ಪಂಚಾಯತಿ/ಅನುಷ್ಠಾನ ಇಲಾಖೆಗಳ ಹಂತದಲ್ಲಿ ಸೃಜಿಸಿರುವ ಎಫ್.ಟಿ.ಒ.ಗಳ ಕಾಮಗಾರಿಗಳ ಗುಣಮಟ್ಟವನ್ನು, ವಿವಿಧ ಹಂತಗಳಲ್ಲಿ ಪರಿಶೀಲನೆ ಮಾಡುವುದು ಅಗತ್ಯವಾಗಿರುತ್ತದೆ. ಆದ ಕಾರಣ, ವೆಚ್ಚ ಪಾವತಿಸಲು ಸೃಜಿಸಿರುವ ಎಫ್.ಟಿ.ಒ.ಗಳ ಕಾಮಗಾರಿಗಳನ್ನು ಈ ಕೆಳಕಂಡ ಅಧಿಕಾರಿಗಳು Geo-MGNREGA Portal ಮತ್ತು ಕಡತಗಳನ್ನು ಪರಿಶೀಲಿಸಿ ಗುಣಮಟ್ಟ ಹೊಂದಿರುವ ಕಾಮಗಾರಿಗಳಿಗೆ ಮಾತ್ರ ಎಫ್.ಟಿ.ಒ.ಗಳನ್ನು ಇತ್ಯರ್ಥಪಡಿಸಲು ತಿಳಿಸಿದೆ.

## ಗ್ರಾಮ ಪಂಚಾಯತಿ ಅನುಷ್ಠಾನಿಸುತ್ತಿರುವ ಕಾಮಗಾರಿಗಳನ್ನು ಪರಿಶೀಲಿಸುವುದು.

| ಅಧಿಕಾರಿಗಳು | ಪರಿಶೀಲಿಸಬೇಕಾದ ಕಾಮಗಾರಿ ಪ್ರಮಾಣ |
|---|---|
| 1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ | - 1% of FTOs Pending for Payment |
| 2. ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿಗಳು | - 2% of FTOs Pending for Payment |
| 3. ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳು | - 2% of FTOs Pending for Payment |
| 4. ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು | - 5% of FTOs Pending for Payment |
| 5. ಸಹಾಯಕ ನಿರ್ದೇಶಕರು (ನರೇಗಾ) | - 10% of FTOs Pending for Payment |

## ಅನುಷ್ಠಾನ ಇಲಾಖೆಗಳು ಅನುಷ್ಠಾನಿಸುತ್ತಿರುವ ಕಾಮಗಾರಿಗಳನ್ನು ಪರಿಶೀಲಿಸುವುದು

| ಅಧಿಕಾರಿಗಳು | ಪರಿಶೀಲಿಸಬೇಕಾದ ಕಾಮಗಾರಿ ಪ್ರಮಾಣ |
|---|---|
| 1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ | - 1% of FTOs Pending for Payment |
| 2. ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿಗಳು | - 2% of FTOs Pending for Payment |
| 3. ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳು | - 2% of FTOs Pending for Payment |
| 4. ಜಿಲ್ಲಾ ಹಂತದ ಅನುಷ್ಠಾನ ಇಲಾಖೆ ಅಧಿಕಾರಿಗಳು | - 10% of FTOs Pending for Payment |
| 5. ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು | - 5% of FTOs Pending for Payment |

ಈ ಕೆಳಕಂಡ ನಿಬಂಧನೆಗಳನ್ವಯ ಅಧಿಕಾರಿಗಳು ಪರಿಶೀಲನೆಯನ್ನು ಕೈಗೊಳ್ಳುವುದು.

1. ಈ ಕೆಳಕಂಡ ನಮೂನೆಯಲ್ಲಿನಂತೆ ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಸ್ಪಷ್ಟ ಶಿಫಾರಸ್ಸಿನೊಂದಿಗೆ ಅನುದಾನ ಬಿಡುಗಡೆಗೆ ಪತ್ರ ಸಲ್ಲಿಸತಕ್ಕದ್ದು. ಅದನ್ನು ನಿಗಧಿಪಡಿಸಿದ Mail ID: nregaaudit2021@gmail.com ಗೆ ಮಾತ್ರ ಸಲ್ಲಿಸತಕ್ಕದ್ದು.

| ಕ್ರ.ಸಂ. | ಜಿಲ್ಲೆಯಲ್ಲಿ ಬಾಕಿ ಇರುವ ಒಟ್ಟು FTO ಗಳ ಸಂಖ್ಯೆ | ಜಿಲ್ಲೆಯಿಂದ ಶಿಫಾರಸ್ಸು ಮಾಡಿದ ಒಟ್ಟು ಮೊತ್ತ | ಜಿಲ್ಲೆಯಿಂದ Reject ಮಾಡಿದ FTO ಗಳ ಸಂಖ್ಯೆ ಮತ್ತು ಮೊತ್ತ | ಷರಾ |
|---|---|---|---|---|
| | | | | |

2. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಶಿಫಾರಸ್ಸು ಮಾಡಿರುವ ಸಾಮಗ್ರಿ ಮೊತ್ತವು ನರೇಗಾ (NREGA-Soft) ತಂತ್ರಾಂಶದಲ್ಲಿರುವ ನಿಮ್ಮ ಜಿಲ್ಲೆಯ 1st and 2nd Signatory ನಲ್ಲಿನ ಒಟ್ಟು FTO ಗಳು ಮತ್ತು ಒಟ್ಟು ಮೊತ್ತ ಎಲ್ಲವನ್ನು ಒಳಗೊಂಡಿರತಕ್ಕದ್ದು.
3. ಸದರಿ ಪತ್ರದಲ್ಲಿ ಶಿಫಾರಸ್ಸು ಮಾಡಿರುವಂತೆ ಪ್ರತಿ ಹಂತದ ಪರಿಶೀಲನಾ ಅಧಿಕಾರಿಯವರು ಪ್ರಸ್ತಾಪಿಸಿರುವ rejected list ಅನ್ನು ಅವರ ಧೃಡೀಕರಣದೊಂದಿಗೆ ಸಲ್ಲಿಸುವುದು ಕಡ್ಡಾಯವಾಗಿದೆ.
4. ನರೇಗಾದಡಿ ನಿರ್ವಹಿಸುವ ಎಲ್ಲಾ ಕಾಮಗಾರಿ/ಸಾಮಗ್ರಿ ವೆಚ್ಚದ ಬಿಲ್ಲುಗಳನ್ನು Karnataka Finance Code 1958 ಯ ನಿಯಮಾವಳಿಗಳಂತೆ ಹಾಗೂ ಗ್ರಾಮ ಪಂಚಾಯಿತಿ ಆಯವ್ಯಯ ಮತ್ತು ಲೆಕ್ಕ ಪತ್ರಗಳ ನಿಯಮಗಳು 2006ರಂತೆ ಬಿಲ್ಲುಗಳನ್ನು ಪರಿಶೀಲಿಸಿ, ಧೃಡೀಕರಿಸಿದ ನಂತರ ಪಾವತಿ ಮಾಡಲು ಕ್ರಮವಹಿಸುವುದು.
5. ನಿಮ್ಮ ಜಿಲ್ಲೆಗೆ ಸಂಬಂಧಿಸಿದಂತೆ ಜಿಲ್ಲೆಯ DPC Login ನಲ್ಲಿನ ಎಲ್ಲಾ Vendor ಗಳನ್ನು ಪರಿಶೀಲಿಸಿದ್ದು, ಕ್ರಮಬದ್ಧವಲ್ಲದ Vendor ಗಳನ್ನು ಮರಪರಿಶೀಲಿಸಿ Unfreeze ಮಾಡಲಾಗಿದೆಯೆಂದು ಧೃಡೀಕರಿಸುವುದು.
6. ಮಹಾತ್ಮ ಗಾಂಧಿ ನರೇಗಾ ಯೋಜನೆ AMC 7.1.7 ಪ್ರಕಾರ ಸಾಮಗ್ರಿ ಪೂರೈಕೆದಾರರ ನೊಂದಣಿ ಪ್ರಕ್ರಿಯೆಯನ್ನು KTPP ನಿಯಮಗಳನ್ನು ಅನುಸರಿಸಿ ನಡೆಸಲಾಗಿದ್ದು, ಯಶಸ್ವಿ ಬಿಡ್ಡುದಾರರಾಗಿರುವುದನ್ನು ಖಚಿತಪಡಿಸಿಕೊಳ್ಳುವುದು.
7. ನರೇಗಾ ಯೋಜನೆಯಡಿ ಪಾವತಿಸುವ ಎಲ್ಲಾ ಸಾಮಗ್ರಿ ಮೊತ್ತದ ಬಿಲ್ಲುಗಳು ಗ್ರಾಮ ಪಂಚಾಯಿತಿ ಆಯವ್ಯಯ ಮತ್ತು ಲೆಕ್ಕ ಪತ್ರಗಳ ನಿಯಮಗಳು 2006ರಂತೆ ಹಾಗೂ ಆರ್ಥಿಕ ಪ್ರತ್ಯಾಯೋಜನೆಗಳನ್ವಯ ಆರ್ಥಿಕ ಮಿತಿಗೊಳಪಟ್ಟು ಮಂಜೂರಾತಿ ನೀಡಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
8. ಜಿಲ್ಲೆಗಳಿಂದ ಕೆಳಕಂಡಂತೆ ಸಲ್ಲಿಸಿರುವ ಶಿಫಾರಸ್ಸುಗಳಲ್ಲಿ ಹಲವಾರು ನ್ಯೂನ್ಯತೆಗಳನ್ನು ಗಮನಿಸಿದ್ದು, ವಿಶೇಷವಾಗಿ

   **a) ನಾಗರೀಕ ಮಾಹಿತಿ ಫಲಕ (CIB-Board) ಇಲ್ಲದಿರುವುದು**

   **b) 3 ಹಂತದ Geo Tagging ಫೋಟೋ ಇಲ್ಲದಿರುವುದು.**

   **c) ಕಾಮಗಾರಿ ಸ್ಥಳದ ಆರಂಭಿಕ ಮತ್ತು ಪ್ರಗತಿ ಹಾಗೂ ಕೊನೆ ಹಂತದ ಫೋಟೋಗಳು ಹೊಂದಾಣಿಕೆಯಾಗದಿರುವುದು,**

   **d) ಸಾಮಗ್ರಿ ವೆಚ್ಚ ಅನುಮೋದನೆಗಿಂತ ಹೆಚ್ಚಾಗಿ ಪಾವತಿಯಾಗಿರುವುದು, ಇತ್ಯಾದಿ.**

   ಈ ಎಲ್ಲಾ ನ್ಯೂನ್ಯತೆಗಳು ಪುನರಾವರ್ತನೆ ಆಗದಂತೆ ಎಲ್ಲಾ ಹಂತದ ಅಧಿಕಾರಿಗಳು ಪರಿಶೀಲಿಸಿ ಶಿಫಾರಸ್ಸು ಮಾಡುವುದು.
9. ನರೇಗಾ ಯೋಜನೆಯಡಿ ಪಾವತಿಸಲಾಗುತ್ತಿರುವ ಎಲ್ಲಾ ಬಿಲ್ಲುಗಳಲ್ಲಿನ ಶಾಸನಬದ್ಧ ಕಟಾವಣೆಗಳನ್ನು ಸಂಬಂಧಪಟ್ಟ ಇಲಾಖೆಗೆ ಕಾಲಕಾಲಕ್ಕೆ ಪಾವತಿಯಾಗಿರುವುದನ್ನು ಧೃಢೀಪಡಿಸಿಕೊಳ್ಳುವುದು ಹಾಗೂ ಪ್ರತಿ ಮಾಹೆ 10ನೇ ತಾರೀಖಿನ ಒಳಗೆ GST Return Filing ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದು.
10. ನಿಮ್ಮ ಜಿಲ್ಲೆಗಳಿಂದ ಗ್ರಾಮ ಪಂಚಾಯಿತಿ/ಆರ್ಥಿಕ ಇಲಾಖೆಗಳಿಂದ ಅನುಷ್ಠಾನಗೊಳಿಸುವ ಸಮುದಾಯ ಕಾಮಗಾರಿಗಳನ್ನು FTO ಮೂಲಕ ಪಾವತಿಯಾದ ನಂತರ ದಾಖಲೆಗಳನ್ನು

10. ನಿಮ್ಮ ಜಿಲ್ಲೆಗಳಿಂದ ಗ್ರಾಮ ಪಂಚಾಯಿತಿ/ಆರ್ಥಿಕ ಇಲಾಖೆಗಳಿಂದ ಅನುಷ್ಠಾನಗೊಳಿಸುವ ಸಮುದಾಯ ಕಾಮಗಾರಿಗಳನ್ನು FTO ಮೂಲಕ ಪಾವತಿಯಾದ ನಂತರ ದಾಖಲೆಗಳನ್ನು ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯಿತಿರವರಿಂದ Random ಆಗಿ ಆಂತರಿಕ ಲೆಕ್ಕ ಪರಿಶೋಧನೆ ಕೈಗೊಳ್ಳಲು ಕ್ರಮವಹಿಸುವುದು.
11. ತಾಲ್ಲೂಕು/ಗ್ರಾಮ ಪಂಚಾಯತಿ ಹಂತದಲ್ಲಿ ಪಾವತಿಯಾಗುವ ಎಲ್ಲಾ ಬಿಲ್ಲುಗಳನ್ನು MCE ಹಾಗೂ ಗ್ರಾಮ ಪಂಚಾಯಿತಿ ಆಯವ್ಯಯ ಮತ್ತು ಲೆಕ್ಕ ಪತ್ರಗಳ ನಿಯಮಗಳು 2006ರಂತೆ ಪ್ರಕಾರ ಪರಿಶೀಲಿಸಿ ದಾಸ್ತಾನು ಪುಸ್ತಕವನ್ನು ನಿರ್ವಹಿಸಿರುವುದರ ಬಗ್ಗೆ ಧೃಡೀಕರಿಸಿಕೊಳ್ಳುವುದು.
12. ಕಾಮಗಾರಿಗಳ ಗುಣಮಟ್ಟ ತೃಪ್ತಿಕರವಾಗಿಲ್ಲದಿದ್ದಲ್ಲಿ FTO ಗಳನ್ನು ರದ್ದುಪಡಿಸಲು ಆಯುಕ್ತಾಲಯದ ಇ-ಮೇಲ್:- nregaaudit2021@gmail.com ಗೆ ವರದಿ ಸಲ್ಲಿಸುವುದು.
13. ನರೇಗಾ ಯೋಜನೆ ಮಾರ್ಗಸೂಚಿಗಳಲ್ಲಿ ಅನುಮತಿಸಿದ ಕಾಮಗಾರಿಗಳಿಗೆ ಮಾತ್ರ ಪಾವತಿಸಲು ಕ್ರಮವಹಿಸುವುದು.
14. ಅನುಮೋದಿತ Data Sheet/Estimate ಗಳಲ್ಲಿರುವ ಚಟುವಟಿಕೆಗಳು MIS ರಲ್ಲಿ Material Bill ಗಳಲ್ಲಿರುವುದನ್ನು ಧೃಡೀಕರಿಸಿಕೊಂಡು ಪಾವತಿಸಲು ಕ್ರಮವಹಿಸುವುದು.
15. ಕಾಮಗಾರಿಗಳು ಅನುಮೋದಿತ ಕ್ರಿಯಾ ಯೋಜನೆಯಲ್ಲಿರುವುದನ್ನು ಧೃಡೀಕರಿಸಿಕೊಂಡು ಪಾವತಿಸಲು ಕ್ರಮ ವಹಿಸುವುದು.

ಮೇಲ್ಕಂಡ ನಿಬಂಧನೆಗಳನ್ನು ಉಲ್ಲಂಘನೆ ಮಾಡಿ ಪಾವತಿಸಿದಲ್ಲಿ, ಸಂಬಂಧಿತ 1 ಮತ್ತು 2ನೇ Signatory ಸಹಿ ಮಾಡುವ ಅಧಿಕಾರಿಗಳೇ ಜವಾಬ್ದಾರರಾಗಿರುತ್ತಾರೆ.

ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು ಗೌರವದೊಂದಿಗೆ

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಘನ ಅವಗಾಹನೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸುತ್ತಾ ಸೂಕ್ತ ಕ್ರಮವಹಿಸಲು ಹಾಗೂ ಸಂಬಂಧಿಸಿದವರಿಗೆ ನಿರ್ದೇಶನ ನೀಡಲು ಕೋರಿದೆ.
3. ಜಿಲ್ಲೆಯ ಎಲ್ಲಾ ಅನುಷ್ಠಾನ ಇಲಾಖೆಗಳ ಮುಖ್ಯಸ್ಥರಿಗೆ (ಜಂಟಿ ನಿರ್ದೇಶಕರು ತೋಟಗಾರಿಕೆ, ರೇಷ್ಮೆ, ಕೃಷಿ, PRED ಮತ್ತು ಇತರೆ) ಕಳುಹಿಸುತ್ತಾ ಅದರಂತೆ ಕ್ರಮವಹಿಸಲು ಆದೇಶಿಸಿದೆ.
4. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ಮುಖ್ಯ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರಿಗೆ ಮಾಹಿತಿಗಾಗಿ ಹಾಗೂ ಅದರಂತೆ ಕ್ರಮವಹಿಸಲು ತಿಳಿಸಿದೆ.
6. ಕಛೇರಿ ಪ್ರತಿ.